ಕರ್ನಾಟಕ ಸರ್ಕಾರ

# ಕೋವಿಡ್ – 19 ರ ಹಿನ್ನೆಲೆಯಲ್ಲಿ 2020–21ನೇ ಶೈಕ್ಷಣಿಕ ಸಾಲಿನಲ್ಲಿ ಪಠ್ಯವಸ್ತು / ಪಠ್ಯಾಂಶ ಕಡಿತದ ವಿವರ

**ತರಗತಿ :** 1 ರಿಂದ 5 **ವಿಷಯ :** ಪರಿಸರ ಅಧ್ಯಯನ **ಮಾಧ್ಯಮ :** ಕನ್ನಡ

**1ನೇ ಸೆಪ್ಟಂಬರ್ 2020 ರಿಂದ 31ನೇ ಮಾರ್ಚ್ 2021 – 120 ದಿನಗಳು**

## ಶಿಕ್ಷಕರ ಕೈಪಿಡಿ

**ಕರ್ನಾಟಕ ಪಠ್ಯ ಪುಸ್ತಕ ಸಂಘ (ರಿ.),**
**100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,**
**ಬೆಂಗಳೂರು – 85.**

# ಮುನ್ನುಡಿ

ಕೋವಿಡ್ 19 ರ ಕಾರಣದಿಂದ 2020–21ನೇ ಶೈಕ್ಷಣಿಕ ಸಾಲಿನಲ್ಲಿ ಶಾಲಾ ಬೋಧನಾ ದಿನಗಳನ್ನು ಕಡಿತಗೊಳಿಸುವ ಹಿನ್ನೆಲೆಯಲ್ಲಿ ಪಠ್ಯವಸ್ತು / ಪಠ್ಯಾಂಶಗಳನ್ನು ಕಡಿತಗೊಳಿಸುವುದು ಅನಿವಾರ್ಯವಾಗಿದೆ. ಡಿ.ಎಸ್‌ಇ.ಆರ್.ಟಿ ಸಂಸ್ಥೆಯು ನೀಡಿದ 2 ಹಂತಗಳ (ಆಗಸ್ಟ್ – 2020 ರಿಂದ ಮಾರ್ಚ್ 2021 ಮತ್ತು ಸೆಪ್ಟಂಬರ್ – 2020 ರಿಂದ ಮಾರ್ಚ್ 2021) ಶಾಲಾ ದಿನಗಳನ್ನು (140/120) ಆಧರಿಸಿ, 1 ರಿಂದ 5ನೇ ತರಗತಿಯ ಪರಿಸರ ಅಧ್ಯಯನ ವಿಷಯದ ಲಭ್ಯ ಬೋಧನಾ ಅವಧಿಗಳಿಗೆ ಅನುಗುಣವಾಗಿ ಪಠ್ಯವಸ್ತು / ಪಠ್ಯಾಂಶವನ್ನು ಕಡಿಮೆ ಮಾಡಲಾಗಿದೆ.

ಮಗುವಿನ ಮುಂದಿನ ತರಗತಿಗಳ ಕಲಿಕೆಗೆ ಯಾವುದೇ ಧಕ್ಕೆಯಾಗದಂತೆ ನಿರಂತರತೆಯನ್ನು ಕಾಯ್ದುಕೊಳ್ಳುವುದು ಹಾಗೂ ಶಿಕ್ಷಕರು, ಮಕ್ಕಳು ಮತ್ತು ಶಾಲಾ ಒತ್ತಡವನ್ನು ಕಡಿಮೆ ಮಾಡುವುದು ಹೇಗೆ ಎಂಬ ಸವಾಲು ಎದುರಾದ ಈ ಸಂದರ್ಭದಲ್ಲಿ, 1 ರಿಂದ 10ನೇ ತರಗತಿಯವರೆಗಿನ ಕಲಿಕೆಯಲ್ಲಿ ವಿವಿಧ ಪರಿಕಲ್ಪನೆ / ಸಾಮರ್ಥ್ಯಗಳು ಹೇಗೆ ಶ್ರೇಣೀಕೃತ ಹಾಗೂ ಸುರುಳಿಯಾಕಾರವಾಗಿ ಸಾಗುತ್ತವೆ ಎಂಬುದನ್ನು ಅಧ್ಯಯನ ಮಾಡಿ, ನಂತರ 1 ರಿಂದ 5 ನೇ ತರಗತಿಯ ಪರಿಸರ ಅಧ್ಯಯನ ವಿಷಯದ ಪಠ್ಯವಸ್ತು ಮತ್ತು ಪಠ್ಯಪುಸ್ತಕಗಳಲ್ಲಿ ಕೆಲವು ಪರಿಕಲ್ಪನೆ / ಸಾಮರ್ಥ್ಯಗಳು / ಪಾಠಗಳು / ಪಠ್ಯಾಂಶಗಳನ್ನು ಕೈಬಿಡಲಾಗಿದೆ. ಈ ಪ್ರಕ್ರಿಯೆಯ ಸಮರ್ಥನೀಯ ಅಂಶಗಳು ಹೀಗಿವೆ –

- ಪುನರಾವರ್ತಿತ ಪರಿಕಲ್ಪನೆ / ಸಾಮರ್ಥ್ಯಗಳನ್ನು ಬಿಡಲಾಗಿದೆ. ಈ ಸಂದರ್ಭದಲ್ಲಿ 6ನೇ ತರಗತಿಗೆ ಹೋಗುವ ಮುನ್ನ, ಮಗುವಿಗೆ 1 ರಿಂದ 5ನೇ ತರಗತಿಯ ಕಲಿಕಾ ಅವಧಿಯಲ್ಲಿ ಈ ಪರಿಕಲ್ಪನೆ / ಸಾಮರ್ಥ್ಯಗಳು ಪುನರ್ಬಲನಗೊಳ್ಳುವುದರ ಬಗ್ಗೆ ಖಚಿತಪಡಿಸಿಕೊಳ್ಳಲಾಗಿದೆ.
- ಮಗು ಸ್ವ–ವೀಕ್ಷಣೆ ಮತ್ತು ಸ್ವ–ಅನುಭವದಿಂದ ಸಹಜವಾಗಿ ಕಲಿಯಬಹುದಾದ (ಸ್ವ–ಕಲಿಕೆ) ಅವಕಾಶಗಳನ್ನು ಗುರ್ತಿಸಿ, ಪ್ರೇರಣೆ ನೀಡಿದೆ. ಕೆಲವು ಪರಿಕಲ್ಪನೆ / ಸಾಮರ್ಥ್ಯವನ್ನು ಬಿಟ್ಟಾಗಲು, ಮಗು ತನ್ನ ಸುತ್ತಲಿನ ಪರಿಸರವನ್ನು ವೀಕ್ಷಿಸಿ, ಅನುಭವದ ಮೂಲಕ ಕಲಿಯುವುದರಿಂದ ಜ್ಞಾನವಲಯ, ಭಾವನಾತ್ಮಕ ವಲಯ ಮತ್ತು ಮನೋಚಾಲಿತ ಕೌಶಲಗಳನ್ನು ತನ್ನದಾಗಿಸಿಕೊಳ್ಳಬಹುದಾಗಿದ್ದು, ಶಿಕ್ಷಕರು ಈ ಪ್ರಕ್ರಿಯೆಗೆ ಸುಗಮಕಾರರಾಗಿ ಕಾರ್ಯನಿರ್ವಹಿಸಲು ಸಾಧ್ಯವಿದೆ.
- ಪರಿಸರ ಅಧ್ಯಯನ ವಿಷಯದ ಸಾಮರ್ಥ್ಯ / ಪರಿಕಲ್ಪನೆಗಳ ಕಲಿಕೆಯು ಚಟುವಟಿಕೆ ಆಧರಿತವಾಗಿರುವುದರಿಂದ ಯಾವುದೇ ಚಟುವಟಿಕೆಗಳನ್ನು ಕಡಿತಗೊಳಿಸಿರುವುದಿಲ್ಲ.
- ಮುಂದಿನ ತರಗತಿಗಳ ಕಲಿಕೆಗೆ ಬುನಾದಿಯಾಗಿರದ ಕೆಲವು ಸಾಮರ್ಥ್ಯ / ಕಲಿವಿನ ಫಲಗಳನ್ನು ಗುರ್ತಿಸಿ, ಅಂತಹ ಸಾಮರ್ಥ್ಯ / ಕಲಿವಿನ ಫಲಗಳನ್ನು ಆಧರಿಸಿದ ಪಾಠಗಳನ್ನು ಬಿಡಲಾಗಿದೆ. ಈ ಸಾಮರ್ಥ್ಯಗಳ ಕಲಿಕೆಯ ಕೊರತೆಯಾಗದಂತೆ ಎಚ್ಚರಿಕೆ ವಹಿಸಲಾಗಿದೆ.
- 1 ರಿಂದ 5 ನೇ ತರಗತಿಯ ಪರಿಸರ ಅಧ್ಯಯನ ವಿಷಯದ ಮೂಲ ಪರಿಕಲ್ಪನೆಗಳು ಎಲ್ಲಿಯೂ ಸೋರಿಕೆಯಾಗದಂತೆ ಎಚ್ಚರಿಕೆ ವಹಿಸಲಾಗಿದೆ.
- ಈ ಪ್ರಕ್ರಿಯೆಯಲ್ಲಿ ಕೈಬಿಡಲಾದ ಸಾಮರ್ಥ್ಯಗಳನ್ನು ಆಧರಿಸಿದ ಪಾಠ/ ಪಠ್ಯಾಂಶಗಳನ್ನು ಪೂರ್ಣವಾಗಿ ಬಿಡುವುದರಿಂದ ಶಿಕ್ಷಕರು ಮತ್ತು ಪೋಷಕರು ಇದನ್ನು ಸುಲಭವಾಗಿ ಅಳವಡಿಸಿಕೊಳ್ಳಲು ಅವಕಾಶವಿದೆ.

ಕಡಿಮೆ ಮಾಡಲಾದ ಪಠ್ಯವಸ್ತು / ಪಠ್ಯಾಂಶಕ್ಕೆ ಮಕ್ಕಳು, ಶಿಕ್ಷಕರು ಹಾಗೂ ಪೋಷಕರು ಹೆಚ್ಚಿನ ಶ್ರಮವಿಲ್ಲದೆ ಹೊಂದಿಕೊಂಡು, ಶಾಲೆಯಲ್ಲಿ ಸುಲಭವಾಗಿ ಅನುಷ್ಠಾನವಾಗಲು ನಮ್ಮ ಪ್ರಯತ್ನ ಸಹಕಾರಿಯಾಗುತ್ತದೆ ಎಂದು ಆಶಿಸುತ್ತೇವೆ.

**– ಸಂಪನ್ಮೂಲ ತಂಡ**

## ಸಲಹೆ ಮತ್ತು ಮಾರ್ಗದರ್ಶನ

**ಶ್ರೀ ಎಂ.ಪಿ. ಮಾದೇಗೌಡ,**
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.),
ಬೆಂಗಳೂರು.

**ಶ್ರೀ ಕೆ.ಜಿ. ರಂಗಯ್ಯ,**
ಉಪನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.),
ಬೆಂಗಳೂರು.

## ಸಂಪನ್ಮೂಲ ತಂಡ

**ಡಾ.ಶೈಲಜಾ,**
ಪ್ರಾಂತೀಯ ನಿರ್ದೇಶಕರು,
CEE ದಕ್ಷಿಣ,
ಬೆಂಗಳೂರು

**ಶ್ರೀಮತಿ ವಸಂತ ಸುಜಯ್**
ಸಹಶಿಕ್ಷಕರು, ಸ.ಪ್ರೌ.ಶಾಲೆ,
ಹೆಬ್ಬಾಳ,
ಬೆಂಗಳೂರು

**ಶ್ರೀ ಸುಜಯ್ ಸಂದೀಪ್,**
ಸಹಶಿಕ್ಷಕರು ಸ.ಹಿ.ಪ್ರಾ.ಶಾಲೆ,
ನವರತ್ನ ಅಗ್ರಹಾರ,
ಬೆಂಗಳೂರು

## ಕಾರ್ಯಕ್ರಮ ಸಂಯೋಜಕರು

**ಶ್ರೀಮತಿ ಎನ್.ಆರ್. ಶೈಲಜ ಕುಮಾರಿ,**
ಹಿರಿಯ ಸಹಾಯಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.),
ಬೆಂಗಳೂರು.

# ಶಿಕ್ಷಕರಿಗೆ ಸೂಚನೆಗಳು

2020–21ನೇ ಶೈಕ್ಷಣಿಕ ಸಾಲಿಗೆ ಲಭ್ಯವಿರುವ ಶಾಲಾ ದಿನಗಳು / ಬೋಧನಾ ಅವಧಿಗಳನ್ನು ಆಧರಿಸಿ, **1 ರಿಂದ 5ನೇ ತರಗತಿಯ ಪರಿಸರ ಅಧ್ಯಯನ** ವಿಷಯದ ಪಠ್ಯವಸ್ತುವಿನಲ್ಲಿ ಕೈಬಿಡಲಾಗಿರುವ ಪರಿಕಲ್ಪನೆ/ಸಾಮರ್ಥ್ಯಗಳಿಗೆ ಸಂಬಂಧಿಸಿದ ಪಾಠ / ಪಠ್ಯಾಂಶವನ್ನು ಕಡಿತಗೊಳಿಸಲಾಗಿದೆ. ಈ ಪ್ರಕ್ರಿಯೆಯನ್ನು **2 ಹಂತಗಳಲ್ಲಿ – 140 ಮತ್ತು 120 ಶಾಲಾ ದಿನಗಳಿಗೆ** ಅನುಗುಣವಾಗಿ ಲಭ್ಯವಾಗುವ **ಬೋಧನಾ ಅವಧಿಗಳಿಗೆ** ಪ್ರತ್ಯೇಕವಾಗಿ ಯೋಜಿಸಿದೆ. ಯಾವುದೇ ಯೋಜಿತ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳುವಾಗ ಶಿಕ್ಷಕರು ಅರ್ಥೈಸಿಕೊಳ್ಳಬೇಕಾದ ಪ್ರಮುಖ ಅಂಶಗಳೆಂದರೆ –

- 1 ರಿಂದ 5ನೇ ತರಗತಿಯ ಪರಿಸರ ಅಧ್ಯಯನ ವಿಷಯದಲ್ಲಿ ಸಾಮರ್ಥ್ಯಗಳು ಶ್ರೇಣೀಕೃತವಾಗಿದ್ದು, ಸುರಳಿಯಾಕಾರದಲ್ಲಿ ಸಾಗುತ್ತವೆ.
- ಪುನರಾವರ್ತಿತ ಪರಿಕಲ್ಪನೆ / ಸಾಮರ್ಥ್ಯಗಳನ್ನು ಗುರ್ತಿಸಿ 2020–21ನೇ ಶೈಕ್ಷಣಿಕ ಸಾಲಿಗೆ ಕೈಬಿಡಲಾಗಿದೆ.
- ಮುಂದಿನ ತರಗತಿಗಳಿಗೆ ಬುನಾದಿಯಾಗಿರದ ಕೆಲವು ಸಾಮರ್ಥ್ಯಗಳನ್ನು ಕೈಬಿಡಲಾಗಿದೆ.
- ಕೈಬಿಡಲಾದ ಕೆಲವು ಪರಿಕಲ್ಪನೆ/ ಸಾಮರ್ಥ್ಯಗಳು ಮುಂದಿನ ತರಗತಿಗಳಲ್ಲಿ ಪುನರ್ಬಲನಗೊಳ್ಳುವುದನ್ನು ಖಚಿತಪಡಿಸಿಕೊಳ್ಳಲಾಗಿದೆ.
- ಚಟುವಟಿಕೆಯಾಧಾರಿತ ಕಲಿಕೆಗೆ ಹೆಚ್ಚಿನ ಒತ್ತು ನೀಡಿದ್ದು, ಯಾವುದೇ ಚಟುವಟಿಕೆಗಳನ್ನು ಕಡಿತಗೊಳಿಸಿರುವುದಿಲ್ಲ.
- ವೀಕ್ಷಣೆ, ಭಾಗವಹಿಸುವಿಕೆ ಮತ್ತು ಸ್ವ–ಕಲಿಕೆಯ ಮೂಲಕ ಕೆಲವು ಸಾಮರ್ಥ್ಯಗಳ ಕಲಿಕೆಗೆ ಅವಕಾಶ ಕಲ್ಪಿಸಲಾಗಿದ್ದು, ಈ ಹಂತದಲ್ಲಿ ಶಿಕ್ಷಕರು ಸುಗಮಕಾರರಾಗಿ ಮಕ್ಕಳ ಕಲಿಕೆಗೆ ಪ್ರೇರಣೆ / ಮಾರ್ಗದರ್ಶನ ನೀಡುವ ಅಗತ್ಯವಿದೆ.
- ಸಾಮರ್ಥ್ಯಗಳ ಕಲಿಕೆಯು ಎಲ್ಲಿಯೂ ಸೋರಿಕೆಯಾಗದಂತೆ ಶಿಕ್ಷಕರು ಕೂಡ ಎಚ್ಚರಿಕೆ ವಹಿಸುವ ಅಗತ್ಯವಿದೆ. ತರಗತಿಯ ಪರಿಸ್ಥಿತಿಗೆ ಅನುಗುಣವಾಗಿ ಶಿಕ್ಷಕರು ಕಲಿಕಾ–ಭೋಧನಾ ಪರಿಸರವನ್ನು ನಿರ್ಮಿಸಿಕೊಳ್ಳುವುದು ಅಪೇಕ್ಷಣೀಯ. ಇದರಿಂದ ಮಕ್ಕಳ ಕಲಿಕೆ ನಿರೀಕ್ಷಿತ ಮಟ್ಟದಲ್ಲಿ ಸಾಗುವುದು.
- ಪೂರ್ವಸಿದ್ಧತೆ, ಬೋಧನೆ ಮತ್ತು ಪರಿಹಾರ ಬೋಧನೆಗಳಿಗೆ ಸೀಮಿತವಾಗಿರುವ ಅವಧಿಗಳನ್ನು ಅಗತ್ಯತೆಗೆ ಅನುಗುಣವಾಗಿ ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶವಿದೆ.
- ಕೈಬಿಡಲಾದ ಪರಿಕಲ್ಪನೆ / ಸಾಮರ್ಥ್ಯ / ಪಠ್ಯಾಂಶವನ್ನು ಮೌಲ್ಯಮಾಪನಕ್ಕೆ ಪರಿಗಣಿಸುವಂತಿಲ್ಲ.
- 2020–21ನೇ ಶೈಕ್ಷಣಿಕ ಸಾಲಿಗೆ ಲಭ್ಯವಾಗುವ ಸೀಮಿತ ಶಾಲಾದಿನ / ಬೋಧನಾ ಅವಧಿಗಳಲ್ಲಿ ಮಕ್ಕಳು ಅರ್ಥಪೂರ್ಣವಾಗಿ ಗರಿಷ್ಠ ಸಾಮರ್ಥ್ಯಗಳನ್ನು ಕಲಿಯಲು ಶಿಕ್ಷಕರು ಅನುಕೂಲಿಸಬೇಕಾಗಿದೆ.

**– ಸಂಪನ್ಮೂಲ ತಂಡ**

## 1ನೇ ತರಗತಿ ಪರಿಸರ ಅಧ್ಯಯನ ವಿಷಯದ ಬೋಧನಾ ಅವಧಿಗಳ ಹಂಚಿಕೆ
## 1ನೇ ಸೆಪ್ಟಂಬರ್ 2020 ರಿಂದ 31ನೇ ಮಾರ್ಚ್ 2021

| ಕ್ರ. ಸಂ. | ಪರಿಕಲ್ಪನೆ / ಉಪಪರಿಕಲ್ಪನೆ | ನಿಗದಿತ ಬೋಧನಾ ಅವಧಿಗಳು | ಕಡಿತಗೊಳಿಸಿದ ಅವಧಿಗಳು | ಲಭ್ಯ ಅವಧಿಗಳು |
|---|---|---|---|---|
| 1. | ಕುಟುಂಬ ಮತ್ತು ಸ್ನೇಹಿತರು | | | |
| | 1.1 ಸಂಬಂಧಗಳು | 15 | 00 | 15 |
| | 1.2 ಕೆಲಸ ಮತ್ತು ಆಟ | 17 | 10 | 07 |
| | 1.3 ಪ್ರಾಣಿಗಳು | 12 | 00 | 12 |
| | 1.4 ಸಸ್ಯಗಳು | 14 | 00 | 14 |
| 2. | ಆಹಾರ | 23 | 13 | 10 |
| 3 | ವಸತಿ | 15 | 00 | 15 |
| 4 | ನೀರು | 12 | 00 | 12 |
| 5. | ಪ್ರಯಾಣ | 13 | 13 | 00 |
| 6 | ನಮ್ಮ ಇತರ ಅವಶ್ಯಕತೆಗಳು | 15 | 15 | 00 |
| 7. | ಸ್ವಚ್ಛತೆ ಮತ್ತು ಸುರಕ್ಷತೆ | 24 | 14 | 10 |
| 8. | ನಮ್ಮ ಭೂಮಿ | 20 | 12 | 08 |
| | ಒಟ್ಟು | **180** | **77** | **103** |

| ಲಭ್ಯವಿರುವ ಒಟ್ಟು ಅವಧಿಗಳು | ಪೂರ್ವ ಸಿದ್ಧತೆ | ಪರಿಹಾರ ಬೋಧನೆ | ಬೋಧನೆಗೆ ಸಿಗುವ ಅವಧಿಗಳು |
|---|---|---|---|
| 135 | 16 | 16 | 103 |

**ತರಗತಿ :** 1
**ಸೆಪ್ಟಂಬರ್ ಮಾಹೆಯಿಂದ ನಿಗದಿಗೊಳಿಸಿದ್ದ ಅವಧಿಗಳು :** 240 (180+30+30)

**ವಿಷಯ :** ಪರಿಸರ ಅಧ್ಯಯನ
**ಸೆಪ್ಟಂಬರ್ ಮಾಹೆಯಿಂದ ಲಭ್ಯ ಅವಧಿಗಳು :** 135 (103+16+16)

| ಮುಖ್ಯ ಪರಿಕಲ್ಪನೆ | ಉಪ ಪರಿಕಲ್ಪನೆ | ಕೈ ಬಿಡಲಾದ ಸಾಮರ್ಥ್ಯ | ನಿಗದಿತ ಬೋಧನಾ ಅವಧಿಗಳು | ಕಡಿತಗೊಳಿಸಿದ ಅವಧಿಗಳು | ಲಭ್ಯ ಅವಧಿಗಳು | ಸಮರ್ಥನೆ (ಕಡಿತಗೊಳಿಸಲು ಕಾರಣ) | ಪಠ್ಯಪುಸ್ತಕದಿಂದ ತೆಗೆದಿರುವ ಪಾಠ/ ಪಠ್ಯಾಂಶ / ಪುಟ |
|---|---|---|---|---|---|---|---|
| ಕುಟುಂಬ ಮತ್ತು ಸ್ನೇಹಿತರು | ಸಂಬಂಧಗಳು | | 15 | 00 | 15 | | |
| | ಕೆಲಸ ಮತ್ತು ಆಟ | * ಮನೆಯಲ್ಲಿ ಹಾಗೂ ನೆರೆಮನೆಯಲ್ಲಿ ನಡೆಯುವ ಕೆಲಸಗಳನ್ನು ಗುರುತಿಸುವರು.<br>* ನೆರೆಹೊರೆಯ ಸಹಕಾರವನ್ನು ಅರಿಯವರು. | 17 | 10 | 07 | 2 ಮತ್ತು 3ನೇ ತರಗತಿಯಲ್ಲಿ ಪುನರಾವರ್ತನೆಯಾಗಿದೆ. | ಪಾಠ 11 **ನೆರೆಹೊರೆ** |
| | ಪ್ರಾಣಿಗಳು | | 12 | 00 | 12 | . | |
| | ಸಸ್ಯಗಳು | | 14 | 00 | 14 | | |
| ಆಹಾರ | ಆಹಾರ | * ಸ್ಥಳೀಯವಾಗಿ ದೊರೆಯುವ ಆಹಾರದ ಬಗ್ಗೆ ತಿಳಿಯುವರು.<br>* ಸ್ಥಳೀಯವಾಗಿ ದೊರೆಯುವ ಆಹಾರ ವಸ್ತುಗಳನ್ನು ಗುರುತಿಸುವರು.<br>*ತಾವು ಸೇವಿಸುವ ಆಹಾರವನ್ನು ಗುರುತಿಸುವರು. | 23 | 13 | 10 | 2 ಮತ್ತು 3ನೇ ತರಗತಿಯಲ್ಲಿ ಪುನರಾವರ್ತನೆಯಾಗಿದೆ. | ಪಾಠ 4 **ಸವಿರುಚಿ** |
| ವಸತಿ | ವಸತಿ | | 15 | 00 | 15 | | |
| ನೀರು | ನೀರು | | 12 | 00 | 12 | | |

| | | | | | | | |
|---|---|---|---|---|---|---|---|
| ಪ್ರಯಾಣ | ಪ್ರಯಾಣ | * ಸ್ಥಳೀಯ ಸಾರಿಗೆಯ ವಿವಿಧ ಬಗೆಗಳನ್ನು ಗುರುತಿಸುವರು. | 13 | 13 | 00 | 2ನೇ ತರಗತಿಯಲ್ಲಿ ಪುನರಾವರ್ತನೆಯಾಗಿದೆ. | ಪಾಠ 9 **ಕೂ......ಚುಕು..ಬುಕು** |
| ನಮ್ಮ ಇತರ ಅವಶ್ಯಕತೆಗಳು | ನಮ್ಮ ಇತರ ಅವಶ್ಯಕತೆಗಳು | * ಮೂಲಭೂತ ಅಗತ್ಯಗಳನ್ನು ಪಟ್ಟಿ ಮಾಡುವರು. | 15 | 15 | 00 | 2ನೇ ತರಗತಿಯಲ್ಲಿ ಪುನರಾವರ್ತನೆಯಾಗಿದೆ. | ಪಾಠ 13 **ನನಗಿವು ಬೇಕು** |
| ಸ್ವಚ್ಛತೆ ಮತ್ತು ಸುರಕ್ಷತೆ | ಸ್ವಚ್ಛತೆ ಮತ್ತು ಸುರಕ್ಷತೆ | * ವೈಯಕ್ತಿಕ ರಕ್ಷಣೆಯ ಬಗ್ಗೆ ತಿಳಿಯುವರು.<br>* ಸರತಿ ಕಾಯುವರು.<br>* ಅವಶ್ಯಕತೆಗಳನ್ನು ಪೂರೈಸುವ ಸೌಲಭ್ಯಗಳನ್ನು ಗುರುತಿಸುವರು | 24 | 14 | 10 | 2ನೇ ತರಗತಿಯಲ್ಲಿ ಪುನರಾವರ್ತನೆ ಯಾಗಿದೆ. | ಪಾಠ 8 **ಸುರಕ್ಷತೆ ಮತ್ತು ಶಿಸ್ತು** |
| ನಮ್ಮ ಭೂಮಿ | ನಮ್ಮ ಭೂಮಿ | * ಸ್ಥಳೀಯ ಪರಿಸರದ ಬಗ್ಗೆ ಮಾಹಿತಿ ಪಡೆಯುವರು. | 20 | 12 | 08 | 2ನೇ ಮತ್ತು 3ನೇ ತರಗತಿಯಲ್ಲಿ ಪುನರಾವರ್ತನೆ ಯಾಗಿದೆ. | ಪಾಠ 15 **ನಮ್ಮ ಸುತ್ತ–ಮುತ್ತ** |
| | | **ಒಟ್ಟು ಬೋಧನಾ ಅವಧಿಗಳು** | 180 | 77 | 103 | | |
| | | **ಪೂರ್ವ ಸಿದ್ಧತೆ** | 30 | 14 | 16 | | |
| | | **ಪರಿಹಾರ ಬೋಧನೆ** | 30 | 14 | 16 | | |
| | | **ಒಟ್ಟು** | **240** | **105** | **135** | | |

## 2ನೇ ತರಗತಿ ಪರಿಸರ ಅಧ್ಯಯನ ವಿಷಯದ ಬೋಧನಾ ಅವಧಿಗಳ ಹಂಚಿಕೆ
## 1ನೇ ಸೆಪ್ಟಂಬರ್ 2020 ರಿಂದ 31ನೇ ಮಾರ್ಚ್ 2021

| ಕ್ರ. ಸಂ. | ಪರಿಕಲ್ಪನೆ / ಉಪಪರಿಕಲ್ಪನೆ | ನಿಗದಿತ ಬೋಧನಾ ಅವಧಿಗಳು | ಕಡಿತಗೊಳಿಸಿದ ಅವಧಿಗಳು | ಲಭ್ಯ ಅವಧಿಗಳು |
|---|---|---|---|---|
| 1. | ಕುಟುಂಬ ಮತ್ತು ಸ್ನೇಹಿತರು | | | |
| | 1,1 ಸಂಬಂಧಗಳು | 27 | 12 | 15 |
| | 1.2 ಕೆಲಸ ಮತ್ತು ಆಟ | 14 | 14 | 00 |
| | 1.3 ಪ್ರಾಣಿಗಳು | 16 | 08 | 08 |
| | 1.4 ಸಸ್ಯಗಳು | 14 | 00 | 14 |
| 2. | ಆಹಾರ | 25 | 11 | 14 |
| 3 | ವಸತಿ | 17 | 00 | 17 |
| 4 | ನೀರು | 11 | 00 | 11 |
| 5. | ಪ್ರಯಾಣ | 08 | 00 | 08 |
| 6 | ನಮ್ಮ ಇತರ ಅವಶ್ಯಕತೆಗಳು | 07 | 07 | 00 |
| 7. | ಸ್ವಚ್ಛತೆ ಮತ್ತು ಸುರಕ್ಷತೆ | 26 | 08 | 18 |
| 8. | ನಮ್ಮ ಭೂಮಿ | 15 | 15 | 00 |
| | ಒಟ್ಟು | **180** | **75** | **105** |

| ಲಭ್ಯವಿರುವ ಒಟ್ಟು ಅವಧಿಗಳು | ಪೂರ್ವ ಸಿದ್ಧತೆ | ಪರಿಹಾರ ಬೋಧನೆ | ಬೋಧನೆಗೆ ಸಿಗುವ ಅವಧಿಗಳು |
|---|---|---|---|
| 135 | 15 | 15 | 105 |

**ತರಗತಿ :** 2 **ವಿಷಯ :** ಪರಿಸರ ಅಧ್ಯಯನ

**ಸೆಪ್ಟಂಬರ್ ಮಾಹೆಯಿಂದ ನಿಗದಿಗೊಳಿಸಿದ್ದ ಅವಧಿಗಳು :** 240 (180+30+30) **ಸೆಪ್ಟಂಬರ್ ಮಾಹೆಯಿಂದ ಲಭ್ಯ ಅವಧಿಗಳು :** 135 (105+15+15)

| **ಮುಖ್ಯ ಪರಿಕಲ್ಪನೆ** | **ಉಪ ಪರಿಕಲ್ಪನೆ** | **ಕೈ ಬಿಡಲಾದ ಸಾಮರ್ಥ್ಯ** | **ನಿಗದಿತ ಬೋಧನಾ ಅವಧಿಗಳು** | **ಕಡಿತಗೊಳಿಸಿದ ಅವಧಿಗಳು** | **ಲಭ್ಯ ಅವಧಿಗಳು** | **ಸಮರ್ಥನೆ (ಕಡಿತಗೊಳಿಸಲು ಕಾರಣ)** | **ಪಠ್ಯಪುಸ್ತಕದಿಂದ ತೆಗೆದಿರುವ ಪಾಠ/ ಪಠ್ಯಾಂಶ / ಪುಟ** |
|---|---|---|---|---|---|---|---|
| ಕುಟುಂಬ ಮತ್ತು ಸ್ನೇಹಿತರು | ಸಂಬಂಧಗಳು | * ಕುಟುಂಬದ/ಸಂಬಂಧಿಕರ ಕುಟುಂಬದ ಸಮಾರಂಭಗಳಲ್ಲಿ ಭಾಗವಹಿಸಿರುವ ಬಗ್ಗೆ ವರದಿ ಮಾಡುವರು.<br>* ರೋಗಿಗಳಿಗೆ ಹಾಗೂ ವಯಸ್ಸಾದವರಿಗೆ ನೆರವು ನೀಡುವ ಮನೋಭಾವ ಬೆಳೆಸಿಕೊಳ್ಳುವರು. | 27 | 12 | 15 | ವೀಕ್ಷಣೆ, ಭಾಗವಹಿಸುವಿಕೆ ಮತ್ತು ಸ್ವ-ಕಲಿಕೆಯ ಮೂಲಕ ಈ ಸಾಮರ್ಥ್ಯ ಕಲಿಯುವ ಅವಕಾಶಗಳಿವೆ. | ಪಾಠ 13<br>**ಹಬ್ಬ ಬಂತು ಹಬ್ಬ**<br>ಪಾಠ 14<br>**ಹಿರಿಯರ ಹಾರೈಕೆ** |
| | ಕೆಲಸ ಮತ್ತು ಆಟ | * ಮನೆಯಲ್ಲಿ ಯಾರು ಯಾರು ಯಾವ ಯಾವ ಕೆಲಸಗಳನ್ನು ಮಾಡುತ್ತಾರೆ ಎಂಬುದನ್ನು ಗುರುತಿಸುವರು.<br>* ಶಾಲೆಯ ಒಳಗೆ ಮತ್ತು ಹೊರಗೆ ಆಡುವ ಆಟಗಳನ್ನು ಪಟ್ಟಿ ಮಾಡುವರು. | 14 | 14 | 00 | ವೀಕ್ಷಣೆ, ಭಾಗವಹಿಸುವಿಕೆ ಮತ್ತು ಸ್ವ-ಕಲಿಕೆಯ ಮೂಲಕ ಈ ಸಾಮರ್ಥ್ಯ ಕಲಿಯುವ ಅವಕಾಶಗಳಿವೆ.<br>3ನೇ ತರಗತಿಯಲ್ಲಿ ಪುನರಾವರ್ತನೆಯಾಗುತ್ತದೆ. | ಪಾಠ 15<br>**ಸಹಾಯ-ಸಹಕಾರ**<br>ಪಾಠ 16<br>**ಆಡಿ ನಲಿ** |
| | ಪ್ರಾಣಿಗಳು | * ಸಾಕುಪ್ರಾಣಿಗಳು ಮತ್ತು ಸಾಕದೆ ಇರುವ ಪ್ರಾಣಿಗಳನ್ನು ವರ್ಗೀಕರಿಸುವರು.<br>* ಸಾಕುಪ್ರಾಣಿಗಳ ಪಾಲನೆ ಮತ್ತು ಪೋಷಣೆಯ ಅಭ್ಯಾಸಗಳನ್ನು ಬೆಳೆಸಿಕೊಳ್ಳುವರು. | 16 | 08 | 08 | ಈ ಪರಿಕಲ್ಪನೆಯು 3ನೇ ತರಗತಿಯಲ್ಲಿ ಪುನರಾವರ್ತನೆಯಾಗುತ್ತದೆ. ವೀಕ್ಷಣೆ, ಭಾಗವಹಿಸುವಿಕೆ ಮತ್ತು ಸ್ವ-ಕಲಿಕೆಯ ಮೂಲಕ ಈ ಸಾಮರ್ಥ್ಯ ಕಲಿಯುವ ಅವಕಾಶಗಳಿವೆ. | ಪಾಠ 2<br>**ಪ್ರಾಣಿ ಪಾಲನೆ** |
| | ಸಸ್ಯಗಳು | | 14 | 00 | 14 | | |

| | | | | | | | |
|---|---|---|---|---|---|---|---|
| ಆಹಾರ | ಆಹಾರ | * ಅಡುಗೆ ಮಾಡಲು ಬಳಸುವ ವಿವಿಧ ಪಾತ್ರೆಗಳನ್ನು ಹೆಸರಿಸುವರು.<br>* ಪ್ರಾಣಿಗಳ ಆಹಾರವನ್ನು ಗುರುತಿಸುವರು. | 25 | 11 | 14 | ವೀಕ್ಷಣೆ, ಭಾಗವಹಿಸುವಿಕೆ ಮತ್ತು ಸ್ವ–ಕಲಿಕೆಯ ಮೂಲಕ ಈ ಸಾಮರ್ಥ್ಯ ಕಲಿಯುವ ಅವಕಾಶಗಳಿವೆ. | ಪಾಠ 6<br>**ಬಗೆ ಬಗೆಯ ಆಹಾರ**<br>ಈ ಪಾಠದ ಕೊನೆಯ 4 ಪುಟಗಳು<br>ಪುಟಸಂಖ್ಯೆ 63 ರಿಂದ 66 |
| ವಸತಿ | ವಸತಿ | | 17 | 00 | 17 | | |
| ನೀರು | ನೀರು | | 11 | 00 | 11 | | |
| ಪ್ರಯಾಣ | ಪ್ರಯಾಣ | | 08 | 00 | 08 | | |
| ನಮ್ಮ ಇತರ ಅವಶ್ಯಕತೆಗಳು | ನಮ್ಮ ಇತರ ಅವಶ್ಯಕತೆಗಳು | * ಮಕ್ಕಳು ತಮ್ಮ ಅವಶ್ಯಕತೆಗಳ ಬಗ್ಗೆ ಅರಿಯುವರು. | 07 | 07 | 00 | ವೀಕ್ಷಣೆ, ಭಾಗವಹಿಸುವಿಕೆ ಮತ್ತು ಸ್ವಕಲಿಕೆಯ ಮೂಲಕ ಈ ಸಾಮರ್ಥ್ಯ ಕಲಿಯುವ ಅವಕಾಶಗಳಿವೆ. | ಪಾಠ 17<br>**ನಮಗೆ ಇವೂ ಬೇಕು** |
| ಸ್ವಚ್ಛತೆ ಮತ್ತು ಸುರಕ್ಷತೆ | ಸ್ವಚ್ಛತೆ ಮತ್ತು ಸುರಕ್ಷತೆ | * ಸಾರ್ವಜನಿಕ ಆಸ್ತಿಗಳನ್ನು ಗುರುತಿಸುವರು.<br>* ಅಗತ್ಯ ಪೂರೈಕೆಯ ಬಗ್ಗೆ ಹಿರಿಯರಿಂದ ಕೇಳಿ ತಿಳಿಯುವರು. | 26 | 08 | 18 | ವೀಕ್ಷಣೆ, ಭಾಗವಹಿಸುವಿಕೆ ಮತ್ತು ಸ್ವಕಲಿಕೆಯ ಮೂಲಕ ಈ ಸಾಮರ್ಥ್ಯ ಕಲಿಯುವ ಅವಕಾಶಗಳಿವೆ.<br>3ನೇ ತರಗತಿಯಲ್ಲಿ ಪುನರಾವರ್ತನೆಯಾಗುತ್ತದೆ. | ಪಾಠ 10<br>**ನಮ್ಮೆಲ್ಲರ ಆಸ್ತಿ** |
| ನಮ್ಮ ಭೂಮಿ | ನಮ್ಮ ಭೂಮಿ | * ಸೂರ್ಯ–ಚಂದ್ರ–ನಕ್ಷತ್ರಗಳನ್ನು ವೀಕ್ಷಿಸಿ, ಕಣ್ಣಿಗೆ ಕಾಣುವ ಇವುಗಳ ಲಕ್ಷಣಗಳನ್ನು ಗುರುತಿಸುವರು.<br>*ಸ್ಥಳೀಯ ಭೌಗೋಳಿಕ ಲಕ್ಷಣಗಳನ್ನು ಗುರುತಿಸುವರು.<br>* ತಮ್ಮ ಹೋಬಳಿ ಮತ್ತು ತಾಲ್ಲೂಕುಗಳನ್ನು ಗುರುತಿಸುವರು. | 15 | 15 | 00 | ವೀಕ್ಷಣೆ, ಭಾಗವಹಿಸುವಿಕೆ ಮತ್ತು ಸ್ವಕಲಿಕೆಯ ಮೂಲಕ ಈ ಸಾಮರ್ಥ್ಯ ಕಲಿಯುವ ಅವಕಾಶಗಳಿವೆ.<br>3ನೇ ತರಗತಿಯಲ್ಲಿ ಪುನರಾವರ್ತನೆಯಾಗುತ್ತದೆ. | ಪಾಠ 18<br>**ಬಾನಂಗಳದಲ್ಲಿ**<br>ಪಾಠ 19<br>**ಚಂದದೂರು ನನ್ನೂರು** |
| | | **ಒಟ್ಟು ಬೋಧನಾ ಅವಧಿಗಳು** | 180 | 75 | 105 | | |
| | | **ಪೂರ್ವ ಸಿದ್ಧತೆ** | 30 | 15 | 15 | | |
| | | **ಪರಿಹಾರ ಬೋಧನೆ** | 30 | 15 | 15 | | |
| | | **ಒಟ್ಟು** | **240** | **105** | **135** | | |

## 3ನೇ ತರಗತಿ ಪರಿಸರ ಅಧ್ಯಯನ ವಿಷಯದ ಬೋಧನಾ ಅವಧಿಗಳ ಹಂಚಿಕೆ
## 1ನೇ ಸೆಪ್ಟಂಬರ್ 2020 ರಿಂದ 31ನೇ ಮಾರ್ಚ್ 2021

| ಕ್ರ. ಸಂ. | ಪರಿಕಲ್ಪನೆ / ಉಪಪರಿಕಲ್ಪನೆ | ನಿಗದಿತ ಬೋಧನಾ ಅವಧಿಗಳು | ಕಡಿತಗೊಳಿಸಿದ ಅವಧಿಗಳು | ಲಭ್ಯ ಅವಧಿಗಳು |
|---|---|---|---|---|
| 1. | ಕುಟುಂಬ ಮತ್ತು ಸ್ನೇಹಿತರು | | | |
| | 1.1 ಸಂಬಂಧಗಳು | 20 | 13 | 07 |
| | 1.2 ಕೆಲಸ ಮತ್ತು ಆಟ | 16 | 08 | 08 |
| | 1.3 ಪ್ರಾಣಿಗಳು | 15 | 00 | 15 |
| | 1.4 ಸಸ್ಯಗಳು | 22 | 00 | 22 |
| 2. | ಆಹಾರ | 27 | 11 | 16 |
| 3. | ವಸತಿ | 22 | 13 | 09 |
| 4. | ನೀರು | 27 | 17 | 10 |
| 5. | ಪ್ರಯಾಣ | 19 | 09 | 10 |
| 6. | ನಮ್ಮ ಇತರೆ ಅವಶ್ಯಕತೆಗಳು | 12 | 12 | 00 |
| 7. | ಸ್ವಚ್ಛತೆ ಮತ್ತು ಸುರಕ್ಷತೆ | 30 | 00 | 30 |
| 8. | ನಮ್ಮ ಭೂಮಿ | 30 | 18 | 12 |
| | **ಒಟ್ಟು** | **240** | **101** | **139** |

| ಲಭ್ಯವಿರುವ ಒಟ್ಟು ಅವಧಿಗಳು | ಪೂರ್ವ ಸಿದ್ಧತೆ | ಪರಿಹಾರ ಬೋಧನೆ | ಬೋಧನೆಗೆ ಸಿಗುವ ಅವಧಿಗಳು |
|---|---|---|---|
| 170 | 16 | 15 | 139 |

**ತರಗತಿ :** 3
ಸೆಪ್ಟಂಬರ್ ಮಾಹೆಯಿಂದ ನಿಗದಿಗೊಳಿಸಿದ್ದ ಅವಧಿಗಳು : 300 (240+30+30)

**ವಿಷಯ :** ಪರಿಸರ ಅಧ್ಯಯನ
ಸೆಪ್ಟಂಬರ್ ಮಾಹೆಯಿಂದ ಲಭ್ಯ ಅವಧಿಗಳು : 170 (139+16+15)

| ಮುಖ್ಯ ಪರಿಕಲ್ಪನೆ | ಉಪ ಪರಿಕಲ್ಪನೆ | ಕೈ ಬಿಡಲಾದ ಸಾಮರ್ಥ್ಯ | ನಿಗದಿತ ಬೋಧನಾ ಅವಧಿಗಳು | ಕಡಿತಗೊಳಿಸಿದ ಅವಧಿಗಳು | ಲಭ್ಯ ಅವಧಿಗಳು | ಸಮರ್ಥನೆ (ಕಡಿತಗೊಳಿಸಲು ಕಾರಣ) | ಪಠ್ಯಪುಸ್ತಕದಿಂದ ತೆಗೆದಿರುವ ಪಾಠ/ ಪಠ್ಯಾಂಶ / ಪುಟ |
|---|---|---|---|---|---|---|---|
| ಕುಟುಂಬ ಮತ್ತು ಸ್ನೇಹಿತರು | ಸಂಬಂಧಗಳು | * 3 ತಲೆಮಾರುಗಳ ಸದಸ್ಯರ ಸಂಬಂಧಗಳನ್ನು ಅರಿಯುವರು ಮತ್ತು ಸಂಬಂಧಗಳ ಸರಳ ವಂಶವೃಕ್ಷವನ್ನು ರಚಿಸುವರು.<br>* ಕುಟುಂಬದ ಸದಸ್ಯರ ಅನುವಂಶೀಯ ಲಕ್ಷಣಗಳಲ್ಲಿರುವ ಸಾಮ್ಯತೆಯನ್ನು ಗುರುತಿಸುವರು.<br>* ತಾಯಿ ಮಗುವಿನ ಸಂಬಂಧವನ್ನು ಅರಿಯುವರು.<br>* ಭೌತಿಕ ಲಕ್ಷಣಗಳು, ಮೌಲ್ಯಗಳು ಮತ್ತು ಹವ್ಯಾಸಗಳ ಮೇಲೆ ಕುಟುಂಬದ ಪ್ರಭಾವವನ್ನು ಗಮನಿಸುವರು. | 20 | 13 | 07 | 4ನೇ ತರಗತಿಯಲ್ಲಿ ಪುನರಾವರ್ತನೆ ಯಾಗುತ್ತದೆ. | ಪಾಠ 16 **ದೀಪಾಳ ತಲೆಮಾರು**<br>ಪಾಠ 17 **ನನ್ನ ಹವ್ಯಾಸ** |
| | ಕೆಲಸ ಮತ್ತು ಆಟ | * ತನ್ನ ದಿನನಿತ್ಯದ ಕೆಲಸದ ಚಾರ್ಟ್ ತಯಾರಿಸುವರು.<br>* ಕೆಲವು ಮಕ್ಕಳು ದುಡಿಮೆಯಲ್ಲಿ ತೊಡಗಿರಬೇಕಾದ ಅನಿವಾರ್ಯ ಪರಿಸ್ಥಿತಿಯನ್ನು ಅರಿಯುವರು. | 16 | 08 | 08 | ವೀಕ್ಷಣೆ ಮತ್ತು ಸ್ವ-ಕಲಿಕೆಯ ಮೂಲಕ ಈ ಸಾಮರ್ಥ್ಯ ಕಲಿಯುವ ಅವಕಾಶಗಳಿವೆ. 4ನೇ ತರಗತಿಯಲ್ಲಿ ಮುಂದುವರಿಸಿದೆ. | ಪಾಠ 20 **ನನ್ನ ಒಂದು ದಿನ** |
| | ಪ್ರಾಣಿಗಳು | | 15 | 00 | 15 | | |
| | ಸಸ್ಯಗಳು | | 22 | 00 | 22 | | |

| | | | | | | | |
|---|---|---|---|---|---|---|---|
| ಆಹಾರ | ಆಹಾರ | * ಆಹಾರ ತಯಾರಿಕೆಯಲ್ಲಿ ಬಳಸುವ ವಿವಿಧ ಪರಿಕರಗಳು ಮತ್ತು ಇಂಧನಗಳನ್ನು ಗುರುತಿಸುವರು. *ಆಹಾರ ತಯಾರಿಕೆಯಲ್ಲಿ ಕುಟುಂಬದ ಸದಸ್ಯರ ಪಾತ್ರವನ್ನು ಗುರುತಿಸುವರು. | 27 | 11 | 16 | ಅನುಭವದ ಮೂಲಕ ಸಹಜವಾಗಿ ಕಲಿಯುವರು. ಮುಂದಿನ ತರಗತಿಗೆ ಬುನಾದಿ ಸಾಮರ್ಥ್ಯ ವಾಗಿರುವುದಿಲ್ಲ. | ಪಾಠ 7 **ಅಡುಗೆ ಮನೆ** |
| ವಸತಿ | ವಸತಿ | * ಉತ್ತಮ ಮನೆಯ ಲಕ್ಷಣಗಳನ್ನು ಗುರುತಿಸುವರು. * ವಿವಿಧ ಸಂಸ್ಕೃತಿಗನುಗುಣವಾಗಿ ಮನೆಯ ಅಲಂಕಾರದ ವಿಧಾನಗಳನ್ನು ತಿಳಿಯುವರು. * ಶಾಲೆಯಲ್ಲಿ ಉಂಟಾಗುವ ವಿವಿಧ ಕಸಗಳನ್ನು ಗುರುತಿಸುವರು. ಇದರ ಸರಿಯಾದ ವಿಲೇವಾರಿ ಕ್ರಮವನ್ನು ಅರಿಯುವರು ಮತ್ತು ಅನುಸರಿಸುವರು. | 22 | 13 | 09 | ಅನುಭವದ ಮೂಲಕ ಸಹಜವಾಗಿ ವೃದ್ಧಿಯಾಗುತ್ತದೆ.<br><br>ಈ ಪರಿಕಲ್ಪನೆಯನ್ನು 4ನೇ ತರಗತಿಯಲ್ಲಿ ಮುಂದುವರಿಸಿದೆ. | ಪಾಠ 9 **ಚಂದದ ಮನೆ** |
| ನೀರು | ನೀರು | * ನದಿ ಮತ್ತು ಸಮುದ್ರಗಳಲ್ಲಿ ವಾಸಿಸುವ ಪ್ರಾಣಿ (ಜಲಚರ)ಗಳನ್ನು ಗುರುತಿಸುವರು. * ಮಳೆಗೆ ಸಂಬಂಧಿಸಿದಂತೆ ಸಸ್ಯ ಮತ್ತು ಪ್ರಾಣಿಗಳ ಪ್ರತಿಕ್ರಿಯೆಯನ್ನು ಗಮನಿಸುವರು. * ನದಿ, ಮಳೆ ನೀರಿಗೆ ಸಂಬಂಧಿಸಿದ ಹಾಡು, ನೃತ್ಯ ಮುಂತಾದ ಸಾಂಸ್ಕೃತಿಕ ಅಭಿವ್ಯಕ್ತಿಗಳ ಮೂಲಕ ವಿಷಯವನ್ನು ವ್ಯಕ್ತಪಡಿಸುವರು. * ಋತುಮಾನಕ್ಕೆ ತಕ್ಕಂತೆ ನೀರಿನ ಹರಿವಿನಲ್ಲಿ ಆಗುವ ಬದಲಾವಣೆಗಳನ್ನು ಗುರುತಿಸುವರು. | 27 | 17 | 10 | 6ನೇ ತರಗತಿಯ ವಿಜ್ಞಾನ ವಿಷಯದಲ್ಲಿ ಕಲಿಯುವರು.<br><br>ಅನುಭವ ಮತ್ತು ವೀಕ್ಷಣೆಯಿಂದ ಕಲಿಯುವ ಅವಕಾಶಗಳಿವೆ.<br><br>ಸಹಜವಾಗಿ ವೃದ್ಧಿಯಾಗುವ ಸಾಮರ್ಥ್ಯವಾಗಿರುತ್ತದೆ. | ಪಾಠ 5 **ನೀರಿನ ಸಂಸಾರ** |

| | | | | | | | |
|---|---|---|---|---|---|---|---|
| ಪ್ರಯಾಣ | ಪ್ರಯಾಣ | *ಸಂಜ್ಞೆ, ನೃತ್ಯ ಮುಂತಾದವುಗಳ ಮೂಲಕ ಭಾಷೆ ಬಳಸದೆ ಮಾತನಾಡುವರು.<br>* ಪತ್ರದ ಮೂಲಕ ಸಂಪರ್ಕ ಮಾಡುವ ವಿಧಾನ ಹಾಗು ಅಂಚೆ ಕಛೇರಿಯ ಕಾರ್ಯ ಚಟುವಟಿಕೆಗಳನ್ನು ತಿಳಿಯುವರು. | 19 | 09 | 10 | ಸಂವಹನ ಪರಿಕಲ್ಪನೆಯು 4ನೇ ತರಗತಿಯಲ್ಲಿದ್ದು, ಅಲ್ಲಿ ಮಕ್ಕಳು ಕಲಿಯುವ ಅವಕಾಶವಿದೆ. | ಪಾಠ 15 **ಪತ್ರ ಸಂವಾದ** |
| ನಮ್ಮ ಇತರ ಆವಶ್ಯಕತೆಗಳು | ನಮ್ಮ ಇತರ ಆವಶ್ಯಕತೆಗಳು | * ಮಾನವರು ತಮ್ಮ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲು ವಿವಿಧ ವಸ್ತುಗಳನ್ನು ತಯಾರಿಸಲು ಪ್ರಾರಂಭಿಸಿದರು ಎಂಬುದನ್ನು ಮಡಕೆ ಮತ್ತು ಚಕ್ರದ ಉದಾಹರಣೆಯೊಂದಿಗೆ ವಿವರಿಸುವರು.<br>* ಹಿಂದಿನ ದಿನಗಳಲ್ಲಿ ಅನುಸರಿಸುತ್ತಿದ್ದ ಧಾನ್ಯ ಸಂಗ್ರಹಣೆ ವಿದಾನದಲ್ಲಿ ಕಾಲಕ್ರಮೇಣ ಆದ ಬದಲಾವಣೆಗಳ ಬಗ್ಗೆ ಚರ್ಚಿಸುವರು. (ಸ್ಥಳೀಯವಾಗಿ ಧಾನ್ಯ ಸಂರಕ್ಷಣೆಗೆ ಬಳಸುವ ಕ್ರಮಗಳನ್ನು ತಿಳಿಯುವರು.)<br>* ಜೇಡಿಮಣ್ಣಿನಿಂದ ಮಡಕೆಯ ಮಾದರಿಗಳನ್ನು ತಯಾರಿಸುವರು. | 12 | 12 | 00 | ಹಿರಿಯ ತರಗತಿಗಳಲ್ಲಿ ಈ ಸಾಮರ್ಥ್ಯಗಳು ಪುನರಾವರ್ತನೆ ಯಾಗುತ್ತವೆ.<br>5ನೇ ತರಗತಿಯಲ್ಲಿ ಕಲಿಯುವರು.<br>ಗೃಹಕಾರ್ಯಕ್ಕೆ ನೀಡಬಹುದು. | ಪಾಠ 22 **ಮಡಕೆಯ ಕಥೆ** |

| | | | | | | | |
|---|---|---|---|---|---|---|---|
| ಸ್ವಚ್ಛತೆ ಮತ್ತು ಸುರಕ್ಷತೆ | ಸ್ವಚ್ಛತೆ ಮತ್ತು ಸುರಕ್ಷತೆ | | 30 | 00 | 30 | | |
| ನಮ್ಮ ಭೂಮಿ | ನಮ್ಮ ಭೂಮಿ | * ಭೂಮಿಯ ಆಕಾರವನ್ನು ತಿಳಿಯುವರು,<br>* ಮೋಡಕವಿದ, ಮಳೆಯ, ಬಿಸಿಲಿನಿಂದ ಕೂಡಿದ ಪದಗಳನ್ನು ಬಳಸಿ ದಿನದಲ್ಲಿ ಆಗುವ ಬದಲಾವಣೆಗಳನ್ನು ವಿವರಿಸುವರು.<br>* ಸೂರ್ಯೋದಯದ ಸಹಾಯದಿಂದ ದಿಕ್ಕುಗಳನ್ನು ಗುರುತಿಸುವರು. | 30 | 18 | 12 | 5ನೇ ತರಗತಿಯಲ್ಲಿ ಪುನರಾವರ್ತನೆಯಾಗುತ್ತದೆ.<br><br>ಅನುಭವ ಮತ್ತು ವೀಕ್ಷಣೆಯಿಂದ ಕಲಿಯುವ ಅವಕಾಶಗಳಿವೆ. | ಪಾಠ 23<br>**ನಮ್ಮೆಲ್ಲರ ಮನೆ** |
| | | **ಒಟ್ಟು ಬೋಧನಾ ಅವಧಿಗಳು** | 240 | 101 | 139 | | |
| | | **ಪೂರ್ವ ಸಿದ್ಧತೆ** | 30 | 14 | 16 | | |
| | | **ಪರಿಹಾರ ಬೋಧನೆ** | 30 | 15 | 15 | | |
| | | **ಒಟ್ಟು** | **300** | **130** | **170** | | |

**4ನೇ ತರಗತಿ ಪರಿಸರ ಅಧ್ಯಯನ ವಿಷಯದ ಬೋಧನಾ ಅವಧಿಗಳ ಹಂಚಿಕೆ**
**1ನೇ ಸೆಪ್ಟಂಬರ್ 2020 ರಿಂದ 31ನೇ ಮಾರ್ಚ್ 2021**

| ಕ್ರ. ಸಂ. | ಪರಿಕಲ್ಪನೆ / ಉಪಪರಿಕಲ್ಪನೆ | ನಿಗದಿತ ಬೋಧನಾ ಅವಧಿಗಳು | ಕಡಿತಗೊಳಿಸಿದ ಅವಧಿಗಳು | ಲಭ್ಯ ಅವಧಿಗಳು |
|---|---|---|---|---|
| 1. | ಕುಟುಂಬ ಮತ್ತು ಸ್ನೇಹಿತರು | | | |
| | 1.1 ಸಂಬಂಧಗಳು | 30 | 17 | 13 |
| | 1.2 ಕೆಲಸ ಮತ್ತು ಆಟ | 16 | 10 | 06 |
| | 1.3 ಪ್ರಾಣಿಗಳು | 18 | 12 | 06 |
| | 1.4 ಸಸ್ಯಗಳು | 25 | 12 | 13 |
| 2 | ಆಹಾರ | 26 | 19 | 07 |
| 3 | ವಸತಿ | 32 | 08 | 24 |
| 4 | ನೀರು | 24 | 05 | 19 |
| 5 | ಪ್ರಯಾಣ | 11 | 00 | 11 |
| 6 | ನಮ್ಮ ಇತರೆ ಅವಶ್ಯಕತೆಗಳು | 11 | 11 | 00 |
| 7 | ಸ್ವಚ್ಛತೆ ಮತ್ತು ಸುರಕ್ಷತೆ | 28 | 00 | 28 |
| 8 | ನಮ್ಮ ಭೂಮಿ | 19 | 04 | 15 |
| | | 240 | 98 | 142 |

| ಲಭ್ಯವಿರುವ ಒಟ್ಟು ಅವಧಿಗಳು | ಪೂರ್ವ ಸಿದ್ಧತೆ | ಪರಿಹಾರ ಬೋಧನೆ | ಬೋಧನೆಗೆ ಸಿಗುವ ಅವಧಿಗಳು |
|---|---|---|---|
| **170** | **14** | **14** | **142** |

ತರಗತಿ : 4 | ವಿಷಯ : ಪರಿಸರ ಅಧ್ಯಯನ

ಸೆಪ್ಟಂಬರ್ ಮಾಹೆಯಿಂದ ನಿಗದಿಗೊಳಿಸಿದ್ದ ಅವಧಿಗಳು : 300 (240+30+30) | ಸೆಪ್ಟಂಬರ್ ಮಾಹೆಯಿಂದ ಲಭ್ಯ ಅವಧಿಗಳು : 170 (142+14+14)

| ಮುಖ್ಯ ಪರಿಕಲ್ಪನೆ | ಉಪ ಪರಿಕಲ್ಪನೆ | ಕೈ ಬಿಡಲಾದ ಸಾಮರ್ಥ್ಯ | ನಿಗದಿತ ಬೋಧನಾ ಅವಧಿಗಳು | ಕಡಿತಗೊಳಿಸಿದ ಅವಧಿಗಳು | ಲಭ್ಯ ಅವಧಿಗಳು | ಸಮರ್ಥನೆ (ಕಡಿತಗೊಳಿಸಲು ಕಾರಣ) | ಪಠ್ಯಪುಸ್ತಕದಿಂದ ತೆಗೆದಿರುವ ಪಾಠ/ ಪಠ್ಯಾಂಶ / ಪುಟ |
|---|---|---|---|---|---|---|---|
| ಕುಟುಂಬ ಮತ್ತು ಸ್ನೇಹಿತರು | ಸಂಬಂಧಗಳು | * ಕುಟುಂಬದ ಮೌಲ್ಯಗಳಿಂದ ಸಮಾಜದಲ್ಲಿ ಆದ ಬದಲಾವಣೆಯನ್ನು ಗಮನಿಸುವರು.<br>* ಧರ್ಮ, ಮೌಲ್ಯಗಳು ಮತ್ತು ಸಾಂಸ್ಕೃತಿಕ ಆಚರಣೆಗಳಿಂದ ಕೂಡಿರುವ ಒಂದು ಸಣ್ಣ ಘಟಕವೇ ಕುಟುಂಬ ಎಂಬುದನ್ನು ಅರಿಯುವರು.<br>* ಕುಟುಂಬದ ಸದಸ್ಯರ ಮತ್ತು ಸ್ನೇಹಿತರ ಗುಣಗಳು ಮತ್ತು ಕೌಶಲ್ಯಗಳನ್ನು ಗುರುತಿಸುವರು.<br>* ಪ್ರತಿ ವ್ಯಕ್ತಿಯೂ ವಿಶಿಷ್ಟ ಎಂಬುದನ್ನು ಗುರುತಿಸುವರು.<br>* ವಿಶೇಷ ಅವಶ್ಯಕತೆಯುಳ್ಳವರ ನಡುವಿನ ಸಂವಹನ ವಿಧಾನಗಳನ್ನು ಅರಿಯುವರು. ವಿಕಲಚೇತನರ ಬಗ್ಗೆ ಸಂವೇದನಾಶೀಲರಾಗಿ ಪ್ರತಿಕ್ರಿಯಿಸುವರು. | 30 | 17 | 13 | ಹಿರಿಯ ತರಗತಿಗಳಲ್ಲಿ ಕಲಿಯುವರು.<br>ತಮ್ಮ ಸುತ್ತಲಿನ ಪರಿಸರದಲ್ಲಿ ವೀಕ್ಷಣೆ ಮತ್ತು ಭಾಗವಹಿಸುವಿಕೆಯಿಂದ ಸ್ವ-ಕಲಿಕೆಗೆ ಅವಕಾಶವಿದೆ.<br>3ನೇ ತರಗತಿಯಲ್ಲಿ ಇದರ ಕಲಿಕೆ ಆಗಿರುತ್ತದೆ. | ಪಾಠ 17 **ಮನೆಯೇ ಮೊದಲ ಶಾಲೆ**<br>ಪಾಠ 18 **ಪ್ರತಿಯೊಬ್ಬರು ವಿಶಿಷ್ಟ** |
| | ಕೆಲಸ ಮತ್ತು ಆಟ | * ಆಟಗಳು ಮತ್ತು ನಿಯಮಗಳ ಪರಿಚಯ ಮಾಡಿಕೊಳ್ಳುವರು.<br>* ಆಟದಿಂದ ಸಾಮಾಜಿಕ ಸಂಬಂಧಗಳ ವೃದ್ಧಿಯಾಗುವುದು ಎಂಬುದನ್ನು ಗುರುತಿಸುವರು.<br>* ಜಾತ್ರೆ ಮತ್ತು ಸರ್ಕಸ್ಸಿನ ಮೂಲಕ ದೊರೆಯುವ ಮನರಂಜನೆಯ ಬಗ್ಗೆ ವಿವರಿಸುವರು. | 16 | 10 | 06 | ಸಹಜವಾಗಿ ಮಕ್ಕಳಲ್ಲಿ ಬೆಳೆಯುವ ಅಂಶವಾಗಿದೆ.<br>3ನೇ ತರಗತಿಯಲ್ಲಿ ಇದರ ಕಲಿಕೆ ಆಗಿರುತ್ತದೆ. | ಪಾಠ 21 **ಖೋ..** |

| | | | | | | | |
|---|---|---|---|---|---|---|---|
| | ಪ್ರಾಣಿಗಳು | * ಪ್ರಾಣಿಗಳ ವರ್ತನೆಯನ್ನು ವೀಕ್ಷಿಸುವರು.<br>* ಜೇನು ಸಂಗ್ರಹಣೆಯ ವಿಧಾನ ಮತ್ತು ಉಪಯೋಗವನ್ನು ಅರಿಯುವರು. | 18 | 12 | 06 | ಈ ಪರಿಕಲ್ಪನೆಯು 1 ನೇ ತರಗತಿಯಿಂದ ಪ್ರಾರಂಭವಾಗಿ ಮುಂದಿನ ತರಗತಿಗಳಲ್ಲೂ ನಿರಂತರವಾಗಿರುವುದು. ವೀಕ್ಷಣೆಯಿಂದ ಕೂಡ ಕಲಿಯಲು ಅವಕಾಶವಿದೆ. 5 ನೇ ತರಗತಿಯಲ್ಲಿ ಪುನರ್ಬಲನಗೊಳ್ಳುತ್ತದೆ. | ಪಾಠ 2 **ಸವಿಜೇನು** |
| | ಸಸ್ಯಗಳು | * ವಿವಿಧ ರೀತಿಯ ಹೂಗಳನ್ನು ಸಂಗ್ರಹಿಸಿ ಅವುಗಳ ಆಕಾರ, ಬಣ್ಣ, ದಳ, ವಾಸನೆಯ ಬಗ್ಗೆ ಚರ್ಚಿಸುವರು. ಕೆಲವು ಋತುಗಳಲ್ಲಿ ಹೂ ಅರಳುವುದನ್ನು ಗಮನಿಸುವರು.<br>* ದಿನ ನಿತ್ಯದಲ್ಲಿ ಹೂವಿನ ಬಳಕೆಯನ್ನು ಗುರುತಿಸುವರು.<br>* ವಿವಿಧ ವಸ್ತುಗಳ ಮೇಲೆ ಚಿತ್ರಿಸಿರುವ ಹೂಗಳನ್ನು ಗುರುತಿಸುವರು.<br>* ಹೂ ಮಾರುವವರು ಬಳಸುವ ಅನೌಪಚಾರಿಕ ಅಳತೆಗಳನ್ನು ತಿಳಿಯುವರು ಮತ್ತು ಹೂ ಮಾರಾಟದ ಬೆಲೆಯನ್ನು ತಿಳಿಯುವರು. | 25 | 12 | 13 | ಈ ಪರಿಕಲ್ಪನೆಯು 1 ನೇ ತರಗತಿಯಿಂದ ಪ್ರಾರಂಭವಾಗಿ ಮುಂದಿನ ತರಗತಿಗಳಲ್ಲೂ ನಿರಂತರವಾಗಿರುವುದು ಮತ್ತು ವೀಕ್ಷಣೆಯಿಂದ ಕಲಿಯಲು ಅವಕಾಶವಿದೆ. | ಪಾಠ 5 **ಪುಷ್ಪರಾಗ** |

| | | | | | | | |
|---|---|---|---|---|---|---|---|
| | ಆಹಾರ | * ನಾವು ಆಹಾರವನ್ನು ಎಲ್ಲಿಂದ ಮತ್ತು ಹೇಗೆ ಪಡೆಯುತ್ತೇವೆ ಎಂಬುದನ್ನು ವಿವರಿಸುವರು.<br>* ಸಾಮೂಹಿಕ ಭೋಜನ ಮಾಡುವ ಸಂದರ್ಭಗಳನ್ನು ಗುರುತಿಸುವರು. ಇಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ರೂಢಿಸಿಕೊಳ್ಳುವರು.<br>* ಆಹಾರ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ತಿಳಿಯುವರು.<br>* ತಮ್ಮ ಜಿಲ್ಲೆಯ ಹಾಗು ಸುತ್ತಮುತ್ತಲಿನ ಜಿಲ್ಲೆಗಳ ಸಾಂಸ್ಕೃತಿಕ ವೈವಿಧ್ಯತೆಯನ್ನು ಮೆಚ್ಚುವರು.<br>* ಪ್ರಾಣಿ ಮತ್ತು ಪಕ್ಷಿಗಳ ಆಹಾರಭ್ಯಾಸಗಳ ಬಗ್ಗೆ ಚರ್ಚಿಸುವರು. ಇವುಗಳ ಆಹಾರ ಕ್ರಮಕ್ಕೆ ಮತ್ತು ಕೊಕ್ಕು ಹಲ್ಲುಗಳಿಗಿರುವ ಸಂಬಂಧವನ್ನು ಅರಿಯುವರು. | 26 | 19 | 07 | 5 ಮತ್ತು 6ನೇ ತರಗತಿಯಲ್ಲಿ ಪುನರ್ಬಲನಗೊಳ್ಳುತ್ತದೆ.<br>ದಿನನಿತ್ಯದ ಸನ್ನಿವೇಶಗಳಲ್ಲಿ ವೀಕ್ಷಣೆ, ಅನುಭವದ ಮೂಲಕ ಕಲಿಯಲು ಅವಕಾಶಗಳಿವೆ. | ಪಾಠ 9 **ಆಹಾರ–ಅಭ್ಯಾಸ**<br>ಪಾಠ 8 **ಆಹಾರ–ಆರೋಗ್ಯ** ಈ ಪಾಠದ ಪುಟಸಂಖ್ಯೆ 70, 71 ಮತ್ತು 72ರ ಸಂಬಂಧಿತ ಭಾಗ |
| ವಸತಿ | ವಸತಿ | * ಪ್ರಾಣಿಗಳ ಆವಾಸಸ್ಥಾನ ಮತ್ತು ವಸತಿಗಳ ವೈವಿಧ್ಯತೆ ಹಾಗೂ ಅವುಗಳ ಉದ್ದೇಶವನ್ನು ಪತ್ತೆ ಮಾಡುವರು.<br>* ಪಕ್ಷಿಗೂಡುಗಳ ರಚನೆ ಮತ್ತು ಅದಕ್ಕೆ ಬಳಸುವ ಸಾಮಗ್ರಿಗಳಲ್ಲಿನ ವೈವಿಧ್ಯತೆಯನ್ನು ಗುರುತಿಸುವರು. | 32 | 08 | 24 | 6ನೇ ತರಗತಿಯಲ್ಲಿ ಪುನರ್ಬಲನಗೊಳ್ಳುತ್ತದೆ. ತಮ್ಮ ಸುತ್ತಲಿನ ಪರಿಸರದಲ್ಲಿ ವೀಕ್ಷಣೆ ಮತ್ತು ಭಾಗವಹಿಸುವಿಕೆಯಿಂದ ಸ್ವ–ಕಲಿಕೆಗೆ ಅವಕಾಶವಿದೆ. | ಪಾಠ 10 **ವಸತಿ ವೈವಿಧ್ಯ** ಈ ಪಾಠದ ಪುಟಸಂಖ್ಯೆ 93 ಮತ್ತು 94ರ ಸಂಬಂಧಿತ ಭಾಗ |

| | | | | | | | |
|---|---|---|---|---|---|---|---|
| ನೀರು | ನೀರು | * ನೀರಿನ ಮಾಲಿನ್ಯದ ಕಾರಣಗಳು ಮತ್ತು ದುಷ್ಪರಿಣಾಮಗಳನ್ನು ಅರಿಯುವರು.<br>* ನೀರಿನಿಂದ ಹರಡುವ ರೋಗಗಳನ್ನು ಪಟ್ಟಿ ಮಾಡುವರು.<br>* ನಿರ್ಜಲೀಕರಣದ ಕಾರಣಗಳು ಹಾಗು ಪುನರ್ಜಲೀಕರಣ ದ್ರಾವಣ ತಯಾರಿಕೆಯನ್ನು ಅರಿಯುವರು. | 24 | 05 | 19 | ಮುಂದಿನ ತರಗತಿಗಳಲ್ಲಿ ಕಲಿಯುವರು. | ಪಾಠ 7<br>**ಜಲ ಮಾಲಿನ್ಯ – ಸಂರಕ್ಷಣೆ** |
| ಪ್ರಯಾಣ | ಪ್ರಯಾಣ | | 11 | 00 | 11 | | |
| ನಮ್ಮ ಇತರ ಆವಶ್ಯಕತೆಗಳು | ನಮ್ಮ ಇತರ ಆವಶ್ಯಕತೆಗಳು | * ಸ್ವಾಭಾವಿಕ ಸಂಪನ್ಮೂಲಗಳು ಮತ್ತು ಸೃಜನಶೀಲತೆಯು ಮಾನವನ ಬದುಕನ್ನು ಹೇಗೆ ಬದಲಾಯಿಸಿದೆ ಎಂಬುದನ್ನು ಉದಾಹರಣೆಗಳೊಂದಿಗೆ ವಿವರಿಸುವರು.<br>* ಉಡುಪುಗಳಲ್ಲಿರುವ ವೈವಿಧ್ಯತೆ, ಬಟ್ಟೆ ತಯಾರಿಕೆಯಲ್ಲಿ ಬಳಸುವ ಬಣ್ಣ ಮತ್ತು ವಿನ್ಯಾಸದ ಬಗ್ಗೆ ಚರ್ಚಿಸುವರು.<br>* ವಿವಿಧ ಜಿಲ್ಲೆಗಳಲ್ಲಿ ಬಳಸುವ ವಿವಿಧ ಉಡುಪುಗಳ ಬಗ್ಗೆ ತಿಳಿಯುವರು.<br>* ಬಟ್ಟೆ ತುಂಡುಗಳನ್ನು ಸಂಗ್ರಹಿಸಿ, ಉಡುಪಿನ ಮಾದರಿಯನ್ನು ತಯಾರಿಸುವರು. | 11 | 11 | 00 | 6 ಮತ್ತು 7ನೇ ತರಗತಿ ವಿಜ್ಞಾನ ವಿಷಯದಲ್ಲಿ ಕಲಿಯುವರು.<br><br>ತಮ್ಮ ಸುತ್ತಲಿನ ಪರಿಸರದಲ್ಲಿ ವೀಕ್ಷಣೆ ಮತ್ತು ಭಾಗವಹಿಸುವಿಕೆಯಿಂದ ಸ್ವ-ಕಲಿಕೆಗೆ ಅವಕಾಶವಿದೆ. | ಪಾಠ 22<br>**ಸೌಲಭ್ಯಗಳು– ಸುಧಾರಣೆ**<br><br>ಪಾಠ 23<br>**ಉಡುಪು–ವಿನ್ಯಾಸ** |
| ಸ್ವಚ್ಛತೆ ಮತ್ತು ಸುರಕ್ಷತೆ | ಸ್ವಚ್ಛತೆ ಮತ್ತು ಸುರಕ್ಷತೆ | | 28 | 00 | 28 | | |

| | | | | | | | |
|---|---|---|---|---|---|---|---|
| ನಮ್ಮ ಭೂಮಿ | ನಮ್ಮ ಭೂಮಿ | * ಸ್ವಾತಂತ್ರ್ಯ ಹೋರಾಟಗಾರರು, ಸಮಾಜ ಸುಧಾರಕರು ಮತ್ತು ರಾಜ್ಯಕ್ಕೆ ಕೊಡುಗೆ ನೀಡಿದ ಸುಪ್ರಸಿದ್ಧ ವ್ಯಕ್ತಿಗಳ ಪರಿಚಯ ಮಾಡಿಕೊಳ್ಳುವರು. | 19 | 04 | 15 | ಪಠ್ಯಪುಸ್ತಕಗಳ ಪರಿಷ್ಕರಣಾ ಸಂದರ್ಭದಲ್ಲಿ ಸಂಬಂಧಿಸಿದ ಪಾಠವನ್ನು ಪಠ್ಯ ಪುಸ್ತಕದಿಂದ ತೆಗೆದು 6 ನೇ ತರಗತಿಯ ಸಮಾಜ ವಿಜ್ಞಾನಕ್ಕೆ ಸೇರಿಸಿದೆ. | ಪ್ರತ್ಯೇಕ ಪಾಠ / ಪಠ್ಯಾಂಶ ತೆಗೆಯುವ ಅಗತ್ಯ ಇಲ್ಲ. |
| | | **ಒಟ್ಟು ಬೋಧನಾ ಅವಧಿಗಳು** | 240 | 98 | 142 | | |
| | | **ಪೂರ್ವ ಸಿದ್ಧತೆ** | 30 | 16 | 14 | | |
| | | **ಪರಿಹಾರ ಬೋಧನೆ** | 30 | 16 | 14 | | |
| | | **ಒಟ್ಟು** | **300** | **130** | **170** | | |

**5ನೇ ತರಗತಿ ಪರಿಸರ ಅಧ್ಯಯನ ವಿಷಯದ ಬೋಧನಾ ಅವಧಿಗಳ ಹಂಚಿಕೆ**
**1ನೇ ಸೆಪ್ಟಂಬರ್ 2020 ರಿಂದ 31ನೇ ಮಾರ್ಚ್ 2021**

| ಕ್ರ. ಸಂ. | ಪರಿಕಲ್ಪನೆ / ಉಪಪರಿಕಲ್ಪನೆ | ನಿಗದಿತ ಬೋಧನಾ ಅವಧಿಗಳು | ಕಡಿತಗೊಳಿಸಿದ ಅವಧಿಗಳು | ಲಭ್ಯ ಅವಧಿಗಳು |
|---|---|---|---|---|
| 1. | ಕುಟುಂಬ ಮತ್ತು ಸಮುದಾಯ | | | |
| | 1.1 ಕುಟುಂಬ | 10 | 00 | 10 |
| | 1.2 ಸಮುದಾಯ | 10 | 10 | 00 |
| | 1.3 ಕೆಲಸ | 10 | 10 | 00 |
| | 1.4 ಆಟ | 10 | 00 | 10 |
| 2 | ನಮ್ಮ ಪ್ರಪಂಚ | | | |
| | 2.1 ಪ್ರಾಣಿಗಳು | 12 | 00 | 12 |
| | 2.2 ಸಸ್ಯಗಳು | 12 | 00 | 12 |
| 3 | ನೈಸರ್ಗಿಕ ಸಂಪನ್ಮೂಲಗಳು | | | |
| | 3.1 ಸ್ವರೂಪ ಮತ್ತು ಸಂರಕ್ಷಣೆ | 08 | 00 | 08 |
| | 3.2 ನೀರು | 12 | 12 | 00 |
| | 3.3 ವಾಯು | 08 | 00 | 08 |
| | 3.4 ಅರಣ್ಯಗಳು | 07 | 00 | 07 |

| | | | | |
|---|---|---|---|---|
| 4 | ಕೃಷಿ, ಆಹಾರ ಮತ್ತು ವಸತಿ | | | |
| | 4.1 ಕೃಷಿ | 15 | 15 | 00 |
| | 4.2 ಆಹಾರ | 10 | 00 | 10 |
| | 4.3 ವಸತಿ | 12 | 12 | 00 |
| 5 | ದ್ರವ್ಯ | | | |
| | 5.1 ದ್ರವ್ಯದ ಸ್ವರೂಪ | 10 | 00 | 10 |
| | 5.2 ದ್ರವ್ಯದ ವರ್ಗೀಕರಣ | 06 | 06 | 00 |
| **6** | ವಿಸ್ಮಯ ಶಕ್ತಿ | 15 | 15 | 00 |
| **7** | ಬಾನಂಗಳ | 13 | 00 | 13 |
| **8** | ನಮ್ಮ ಭವ್ಯ ಭಾರತ | | | |
| | 8.1 ಭಾರತ – ರಾಜಕೀಯ | 10 | 04 | 06 |
| | 8.2 ಭಾರತ – ಪ್ರಾಕೃತಿಕ | 10 | 04 | 06 |
| | **ಒಟ್ಟು** | **200** | **88** | **112** |

| **ಲಭ್ಯವಿರುವ ಒಟ್ಟು ಅವಧಿಗಳು** | **ಪೂರ್ವ ಸಿದ್ಧತೆ** | **ಬೋಧನೆಗೆ ಸಿಗುವ ಅವಧಿಗಳು** |
|---|---|---|
| 120 | 08 | 112 |

**ತರಗತಿ :** 5 **ವಿಷಯ :** ಪರಿಸರ ಅಧ್ಯಯನ

**ಸೆಪ್ಟಂಬರ್ ಮಾಹೆಯಿಂದ ನಿಗದಿಗೊಳಿಸಿದ್ದ ಅವಧಿಗಳು :** 210 (200+10) **ಸೆಪ್ಟಂಬರ್ ಮಾಹೆಯಿಂದ ಲಭ್ಯ ಅವಧಿಗಳು :** 120 (112+08)

| ಮುಖ್ಯ ಪರಿಕಲ್ಪನೆ | ಉಪ ಪರಿಕಲ್ಪನೆ | ಕೈ ಬಿಡಲಾದ ಸಾಮರ್ಥ್ಯ | ನಿಗದಿತ ಬೋಧನಾ ಅವಧಿಗಳು | ಕಡಿತಗೊಳಿಸಿದ ಅವಧಿಗಳು | ಲಭ್ಯ ಅವಧಿಗಳು | ಸಮರ್ಥನೆ (ಕಡಿತಗೊಳಿಸಲು ಕಾರಣ) | ಪಠ್ಯಪುಸ್ತಕದಿಂದ ತೆಗೆದಿರುವ ಪಾಠ/ ಪಠ್ಯಾಂಶ / ಪುಟ |
|---|---|---|---|---|---|---|---|
| ಕುಟುಂಬ ಮತ್ತು ಸಮುದಾಯ | ಕುಟುಂಬ | | 10 | 00 | 10 | | |
| | ಸಮುದಾಯ | * ವ್ಯಕ್ತಿ ಮತ್ತು ಸಮುದಾಯದ ನಡುವಣ ಸಂಬಂಧವನ್ನು ಗ್ರಹಿಸುವರು.<br>* ಸಮುದಾಯದ ವಿಭಿನ್ನ ರೂಪಗಳನ್ನು ಗುರುತಿಸುವರು.<br>* ಪ್ರಕೃತಿ ವಿಕೋಪಗಳ ಸಂದರ್ಭಗಳಲ್ಲಿ ಸಮುದಾಯದ ನೆರವನ್ನು ಗುರುತಿಸುವರು. | 10 | 10 | 00 | 3 ಮತ್ತು 4ನೇ ತರಗತಿಯಲ್ಲಿ ಇದರ ಮೂಲ ಸಾಮರ್ಥ್ಯದ ಕಲಿಕೆ ಆಗಿರುತ್ತದೆ.<br>ಇದು 6ನೇ ತರಗತಿಗೆ ಬುನಾದಿ ಸಾಮರ್ಥ್ಯ ಆಗಿರುವುದಿಲ್ಲ.<br>9ನೇ ತರಗತಿಯ ಸಮಾಜ ವಿಜ್ಞಾನದಲ್ಲಿ ಪುನರ್ಬಲಗೊಳ್ಳುತ್ತದೆ. | ಪಾಠ 3 **ಸಮುದಾಯ** |
| | ಕೆಲಸ | * ವಿವಿಧ ಕೆಲಸಗಳ ಅಗತ್ಯಗಳು ಮತ್ತು ಅವುಗಳ ಮೌಲ್ಯಗಳನ್ನು ಮನಗಾಣುವರು.<br>* ಶ್ರಮ ಗೌರವವನ್ನು ಮೆಚ್ಚುವರು. | 10 | 10 | 00 | 3 ಮತ್ತು 4ನೇ ತರಗತಿಯಲ್ಲಿ ಇದರ ಮೂಲ ಸಾಮರ್ಥ್ಯದ ಕಲಿಕೆ ಆಗಿರುತ್ತದೆ.<br>ಇದು 6ನೇ ತರಗತಿಗೆ ಬುನಾದಿ ಸಾಮರ್ಥ್ಯ ಆಗಿರುವುದಿಲ್ಲ. 8ನೇ ತರಗತಿಯ ಸಮಾಜ ಶಾಸ್ತ್ರ ಭಾಗದಲ್ಲಿ ಕಲಿಯುವರು. | ಪಾಠ 3 **ಸಮುದಾಯ** |
| | ಆಟ | | 10 | 00 | 10 | | |

| | | | | | | | |
|---|---|---|---|---|---|---|---|
| ನಮ್ಮ ಪ್ರಪಂಚ | ಪ್ರಾಣಿಗಳು | | 12 | 00 | 12 | | |
| | ಸಸ್ಯಗಳು | | 12 | 00 | 12 | | |
| | ಸ್ವರೂಪ ಮತ್ತು ಸಂರಕ್ಷಣೆ | | 08 | 00 | 08 | | |
| ನೈಸರ್ಗಿಕ ಸಂಪನ್ಮೂಲಗಳು | ನೀರು | * ನೀರಿನ ವಿವಿಧ ಆಕರಗಳು ಮತ್ತು ನೀರಿನ ಸಂರಕ್ಷಣೆಯ ಮಹತ್ವವನ್ನು ಮನನ ಮಾಡಿಕೊಳ್ಳುವರು.<br>* ಸಾಂಪ್ರದಾಯಿಕ ಮತ್ತು ಆಧುನಿಕ ಜಲಸಂರಕ್ಷಣಾ ವಿಧಾನಗಳನ್ನು ತಿಳಿಯುವರು. | 12 | 12 | 00 | 3 ಮತ್ತು 4ನೇ ತರಗತಿಯಲ್ಲಿ ಇದರ ಮೂಲ ಸಾಮರ್ಥ್ಯದ ಕಲಿಕೆ ಆಗಿರುತ್ತದೆ.<br>6ನೇ ತರಗತಿಯಿಂದ ವಿಜ್ಞಾನ ವಿಷಯದಲ್ಲಿ ಮುಂದುವರಿಯುತ್ತದೆ. | ಪಾಠ 7<br>**ನೀರು** |
| | ವಾಯು | | 08 | 00 | 08 | | |
| | ಅರಣ್ಯಗಳು | | 07 | 00 | 07 | | |
| ಕೃಷಿ, ಆಹಾರ ಮತ್ತು ವಸತಿ | ಕೃಷಿ | * ನಮಗೆ ಬೇಕಾದ ಆಹಾರ ಬೆಳೆಯುವ ರೈತರ ಬಗ್ಗೆ ಅರಿಯುವರು.<br>* ಕೃಷಿಯಲ್ಲಿ ಬರುವ ವಿವಿಧ ಅಂಶಗಳನ್ನು ಗುರುತಿಸುವರು.<br>* ಕೃಷಿಯಲ್ಲಿ ಕಂಡು ಬರುತ್ತಿರುವ ಬದಲಾವಣೆಗಳನ್ನು ಗುರುತಿಸುವರು. | 15 | 15 | 00 | 8, 9 ಮತ್ತು 10ನೇ ತರಗತಿಯ ಸಮಾಜ ವಿಜ್ಞಾನ ವಿಷಯದಲ್ಲಿ ಕಲಿಯುವರು. | ಪಾಠ 8<br>**ಕೃಷಿ** |
| | ಆಹಾರ | | 10 | 00 | 10 | | |

| | | | | | | | |
|---|---|---|---|---|---|---|---|
| | ವಸತಿ | * ವೈಯಕ್ತಿಕ ಮತ್ತು ಸಾಮೂಹಿಕ ವಸತಿ ಯೋಜನೆಗಳ ಬಗ್ಗೆ ತಿಳಿಯುವರು.<br>* ಗ್ರಾಮೀಣ ಮತ್ತು ನಗರಗಳ ವಸತಿ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವರು. | 12 | 12 | 00 | 3 ಮತ್ತು 4ನೇ ತರಗತಿಯಲ್ಲಿ ಇದರ ಮೂಲ ಸಾಮರ್ಥ್ಯ ಕಲಿಕೆಯಾಗಿರುತ್ತದೆ. 6ನೇ ತರಗತಿಗೆ ಬುನಾದಿ ಸಾಮರ್ಥ್ಯ ಆಗಿರುವುದಿಲ್ಲ. ಇದನ್ನು ವೀಕ್ಷಣೆಯಿಂದ ಕಲಿಯುವ ಅವಕಾಶಗಳಿವೆ. 9ನೇ ತರಗತಿಯ ಸಮಾಜ ವಿಜ್ಞಾನ ವಿಷಯದಲ್ಲಿ ಕಲಿಯುವರು. | ಪಾಠ 10 **ಜನವಸತಿಗಳು** |
| ದ್ರವ್ಯ | ದ್ರವ್ಯದ ಸ್ವರೂಪ | | 10 | 00 | 10 | | |
| | ದ್ರವ್ಯದ ವರ್ಗೀಕರಣ | * ದ್ರವ್ಯವನ್ನು ಧಾತು, ಸಂಯುಕ್ತ ಮತ್ತು ಮಿಶ್ರಣಗಳಾಗಿ ವರ್ಗೀಕರಿಸುವರು. | 06 | 06 | 00 | 9ನೇ ತರಗತಿಯ ವಿಜ್ಞಾನ ವಿಷಯದಲ್ಲಿ ಕಲಿಯುವರು. | ಪಾಠ 12 **ಧಾತು, ಸಂಯುಕ್ತ ಮತ್ತು ಮಿಶ್ರಣಗಳು** |
| ವಿಸ್ಮಯ ಶಕ್ತಿ | ವಿಸ್ಮಯ ಶಕ್ತಿ | * ಕೆಲಸ ಮಾಡಲು ಶಕ್ತಿ ಬೇಕು ಎಂದು ಅರಿಯುವರು.<br>* ಶಕ್ತಿಯ ವಿವಿಧ ರೂಪಗಳು ಹಾಗೂ ಶಕ್ತಿಯ ರೂಪಾಂತರ (ಶಕ್ತಿಯ ರೂಪ ಪರಿವರ್ತನೆ)ವನ್ನು ತಿಳಿಯುವರು.<br>* ಶಕ್ತಿಯ ಆಕರಗಳನ್ನು ಗುರ್ತಿಸಿ ಅವುಗಳ ಅನ್ವಯಗಳನ್ನು ಕಂಡುಕೊಳ್ಳುವರು.<br>* ಶಕ್ತಿ ಸಂರಕ್ಷಣೆಯ ಮಹತ್ವವನ್ನು ಅರಿಯುವರು. | 15 | 15 | 00 | 9ನೇ ತರಗತಿಯ ವಿಜ್ಞಾನ ವಿಷಯದಲ್ಲಿ ಕಲಿಯುವರು. | ಪಾಠ 13 **ವಿಸ್ಮಯ ಶಕ್ತಿ** |
| ಬಾನಂಗಳ | ಬಾನಂಗಳ | | 13 | 00 | 13 | | |

| | | | | | | | |
|---|---|---|---|---|---|---|---|
| ನಮ್ಮ ಭವ್ಯ ಭಾರತ | ಭಾರತ – ಪ್ರಾಕೃತಿಕ | * ಭಾರತದ ವಾಯುಗುಣ, ಸಸ್ಯ ಮತ್ತು ಪ್ರಾಣಿಗಳ ವೈವಿಧ್ಯತೆಯ ಬಗ್ಗೆ ತಿಳಿಯುವರು. | 10 | 04 | 06 | ಮುಂದಿನ ತರಗತಿಗಳಲ್ಲಿ ಕಲಿಯುವರು. | ಪಾಠ 15 **ನಮ್ಮ ಭಾರತ– ಪ್ರಾಕೃತಿಕ ವೈವಿಧ್ಯ** ಈ ಪಾಠದ ಪುಟ ಸಂಖ್ಯೆ 218 ರಿಂದ 226 (ಸಂಬಂಧಿತ ಭಾಗ) |
| | ಭಾರತ – ರಾಜಕೀಯ | * ವಿವಿಧತೆಯಲ್ಲಿ ಏಕತೆ ಮತ್ತು ಭಾವೈಕ್ಯತೆಯನ್ನು ಮೆಚ್ಚುವರು. | 10 | 04 | 06 | 6 ಮತ್ತು 9ನೇ ತರಗತಿಯ ಸಮಾಜ ವಿಜ್ಞಾನ ವಿಷಯದಲ್ಲಿ ಕಲಿಯುವರು. | ಪಾಠ 16 **ನಮ್ಮ ಭಾರತ– ರಾಜಕೀಯ ಮತ್ತು ಸಾಂಸ್ಕೃತಿಕ** ಈ ಪಾಠದ ಪುಟ ಸಂಖ್ಯೆ 237 ರಿಂದ 250 (ಸಂಬಂಧಿತ ಭಾಗ) |
| | | **ಒಟ್ಟು ಬೋಧನಾ ಅವಧಿಗಳು** | 200 | 88 | 112 | | |
| | | **ಪೂರ್ವ ಸಿದ್ಧತೆ** | 10 | 02 | 08 | | |
| | | **ಒಟ್ಟು** | **210** | **90** | **120** | | |